رئاسة الشؤون الدينية
بالمسجد الحرام والمسجد النبوي

# ಇಸ್ಲಾಂ ಅಲ್ಲಾಹನ ಸಂದೇಶವಾಹಕರುಗಳ ಧರ್ಮವಾಗಿದೆ

ಕನ್ನಡ | كنادي | الإسلام دين رسل الله

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು
ನ್ನಬವಿಯ ಧಾರ್ಮಿಕ ವ್ಯವಹಾರಗಳ
ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

# الإِسْلَامُ دِينُ رُسُلِ اللّٰهِ

## ಇಸ್ಲಾಂ ಅಲ್ಲಾಹನ ಸಂದೇಶವಾಹಕರುಗಳ ಧರ್ಮವಾಗಿದೆ


اللَّجْنَةُ العِلْمِيَّةُ

بِرِئَاسَةِ الشُّؤُونِ الدِّينِيَّةِ بِالمَسْجِدِ الحَرَامِ وَالمَسْجِدِ النَّبَوِيِّ

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದುನ್ನಬವಿಯ ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

بِسْمِ اللهِ الرَّحمَنِ الرَّحِيمِ

## ಇಸ್ಲಾಂ ಅಲ್ಲಾಹನ ಸಂದೇಶವಾಹಕರುಗಳ ಧರ್ಮವಾಗಿದೆ

ಇಸ್ಲಾಂ ಎಂದರೆ ವಿಶ್ವವನ್ನು ಸೃಷ್ಟಿಸಿದ ಮತ್ತು ನಿರ್ವಹಿಸುವ ಅಲ್ಲಾಹನಿಗೆ ಸಂಪೂರ್ಣವಾಗಿ ಶರಣಾಗುವುದು, ಪ್ರೀತಿ ಮತ್ತು ಗೌರವದಿಂದ ಅವನ ಆಜ್ಞೆಗಳನ್ನು ಪಾಲಿಸುವುದು. ಇಸ್ಲಾಂನ ಮೂಲ ತತ್ವವೆಂದರೆ ಅಲ್ಲಾಹನನ್ನು ನಂಬುವುದು, ಅವನೊಬ್ಬನೇ ಸೃಷ್ಟಿಕರ್ತ ಎಂದು ಒಪ್ಪಿಕೊಳ್ಳುವುದು ಮತ್ತು ಎಲ್ಲಾ ಜೀವಿಗಳು ಅವನ ಸೃಷ್ಟಿಯೇ ಹೊರತು ಬೇರೆ ಯಾವುದೂ ಅಲ್ಲ ಎಂದು ನಂಬುವುದು. ಅವನೊಬ್ಬನೇ ಆರಾಧನೆಗೆ ಅರ್ಹನು, ಅವನಿಗೆ ಸಮಾನನು ಯಾರೂ ಇಲ್ಲ, ಅವನಿಗೆ ಸಮಾನವಾದ ದೇವರು ಇಲ್ಲ. ಅವನಿಗೆ ಅನೇಕ ಸುಂದರವಾದ ಹೆಸರುಗಳು ಮತ್ತು ಉನ್ನತ ಗುಣಗಳಿವೆ. ಅವನು ಪರಿಪೂರ್ಣನು, ಯಾವುದೇ ಕೊರತೆಯಿಲ್ಲದವನು. ಅವನಿಗೆ ಯಾವುದೇ ಸಂತಾನವಿಲ್ಲ, ಅವನು ಯಾರ ಸಂತಾನವೂ ಅಲ್ಲ. ಅವನಿಗೆ ಸಮಾನನು ಅಥವಾ ಸದೃಶನು ಯಾರೂ ಇಲ್ಲ. ಅವನು ತನ್ನ ಸೃಷ್ಟಿಗಳಲ್ಲಿ ಯಾವುದರ ರೂಪದಲ್ಲಿಯೂ ಬರುವುದಿಲ್ಲ.

ಇಸ್ಲಾಂ ಎಂಬುದು ಅಲ್ಲಾಹನ ಧರ್ಮವಾಗಿದ್ದು, ಬೇರೆ ಯಾವುದೇ ಧರ್ಮವನ್ನು ಅವನು ಜನರಿಂದ

ಸ್ವೀಕರಿಸುವುದಿಲ್ಲ. ಎಲ್ಲಾ ಪ್ರವಾದಿಗಳು ತಂದ ಧರ್ಮ ಇದೇ ಆಗಿದೆ.

ಮತ್ತು ಇಸ್ಲಾಂ ಧರ್ಮದ ಮೂಲ ತತ್ವಗಳಲ್ಲಿ ಎಲ್ಲಾ ಪ್ರವಾದಿಗಳನ್ನು ನಂಬುವುದು ಸೇರಿದೆ. ಅಲ್ಲಾಹು ತನ್ನ ಆಜ್ಞೆಗಳನ್ನು ತನ್ನ ಸೇವಕರಿಗೆ ತಿಳಿಸಲು ಪ್ರವಾದಿಗಳನ್ನು ಕಳುಹಿಸಿದನು ಮತ್ತು ಅವರಿಗೆ ಪವಿತ್ರ ಗ್ರಂಥಗಳನ್ನು ನೀಡಿದನು. ಅವರಲ್ಲಿ ಕೊನೆಯವರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ. ಅಲ್ಲಾಹು ಅವರನ್ನು ಅಂತಿಮ ದೈವಿಕ ಶರಿಯದೊಂದಿಗೆ ಕಳುಹಿಸಿದನು, ಇದು ಅವರಿಗಿಂತ ಮುಂಚೆ ಬಂದ ಪ್ರವಾದಿಗಳ ಶರಿಯಗಳನ್ನು ರದ್ದುಪಡಿಸಿತು. ಅಲ್ಲಾಹು ಅವರನ್ನು ಬೃಹತ್ ನಿಶಾನೆಗಳಿಂದ ಬೆಂಬಲಿಸಿದನು, ಮತ್ತು ಅವುಗಳಲ್ಲಿ ಅತ್ಯಂತ ದೊಡ್ಡದು ಕುರಾನ್. ಕುರಾನ್ ವಿಶ್ವದ ಪ್ರಭುವಿನ ವಾಣಿ ಮತ್ತು ಮಾನವೀಯತೆಯನ್ನರಿತ ಅತ್ಯಂತ ದೊಡ್ಡ ಗ್ರಂಥವಾಗಿದೆ. ಅರ್ಥ, ಪದಗಳು ಮತ್ತು ರಚನೆಯಲ್ಲಿ ಅದು ಅದ್ಭುತವಾಗಿದೆ. ಇದರಲ್ಲಿ ಈ ಜಗತ್ತು ಮತ್ತು ಪರಲೋಕದಲ್ಲಿ ಸಂತೋಷಕ್ಕೆ ಕಾರಣವಾಗುವ ಸತ್ಯದ ಮಾರ್ಗದರ್ಶನವಿದೆ. ಇದು ಇಂದಿಗೂ ಅವತರಿಸಿದ ಅರೇಬಿಕ್ ಭಾಷೆಯಲ್ಲಿಯೇ ಸಂರಕ್ಷಿಸಲ್ಪಟ್ಟಿದೆ, ಅದರಲ್ಲಿ ಒಂದು ಅಕ್ಷರವೂ ಬದಲಾಗಿಲ್ಲ ಹಾಗು ವಿನಿಮಯವಾಗಿಲ್ಲ.

ಇಸ್ಲಾಂನ ಮೂಲ ತತ್ವಗಳಲ್ಲಿ ಮಲಾಯಿಕರನ್ನು ನಂಬುವುದು, ಅಂತಿಮ ದಿನವನ್ನು ನಂಬುವುದು

ಮತ್ತು ಆ ದಿನ ಅಲ್ಲಾಹನು ಜನರನ್ನು ಸಮಾಧಿಯಿಂದ ಎಬ್ಬಿಸಿ ಅವರ ಕರ್ಮಗಳಿಗೆ ಅನುಗುಣವಾಗಿ ಲೆಕ್ಕ ಪರಿಶೀಲಿಸುವನು ಎಂಬುದು ಸೇರಿದೆ. ಒಳ್ಳೆಯ ಕೆಲಸ ಮಾಡಿ ನಂಬಿಕೆಯಿಟ್ಟವರಿಗೆ ಸ್ವರ್ಗದಲ್ಲಿ ಶಾಶ್ವತ ಸುಖವಿದೆ. ಕೆಟ್ಟ ಕೆಲಸ ಮಾಡಿ ನಂಬಿಕೆವಿರಿಸದವರಿಗೆ ನರಕದಲ್ಲಿ ಶಾಶ್ವತ ಶಿಕ್ಷೆಯಿದೆ. ಇಸ್ಲಾಂನ ಮೂಲ ತತ್ವಗಳಲ್ಲಿ ದೇವರು ನಿರ್ಧರಿಸಿದ ಒಳ್ಳೆಯದು ಮತ್ತು ಕೆಟ್ಟದ್ದನ್ನು ನಂಬುವುದು ಸೇರಿದೆ.

ಮುಸ್ಲಿಮರು ಯೇಸುರವರಿಗೆ ಅಲ್ಲಾಹನ ದಾಸ ಮತ್ತು ದೂತನೆಂದು ನಂಬುತ್ತಾರೆ ಮತ್ತು ಅವರನ್ನು ಅಲ್ಲಾಹನ ಪುತ್ರನಲ್ಲ ಎಂದು ನಂಬುತ್ತಾರೆ; ಏಕೆಂದರೆ ಅಲ್ಲಾಹನು ಅಷ್ಟೊಂದು ಮಹಾನ್ ಆಗಿದ್ದು ಅವನಿಗೆ ಮಡದಿ ಅಥವಾ ಮಕ್ಕಳು ಇರಲು ಸಾಧ್ಯವಿಲ್ಲ. ಆದಾಗ್ಯೂ, ಅಲ್ಲಾಹನು ಕುರಾನ್‌ನಲ್ಲಿ ಯೇಸುರವರ ಬಗ್ಗೆ ಹೀಗೆ ಹೇಳಿದ್ದಾನೆ, ಅವರು ಅನೇಕ ಅಲೌಕಿಕ ಶಕ್ತಿಗಳನ್ನು ಪಡೆದ ನಬಿಯಾಗಿದ್ದರು ಮತ್ತು ಅಲ್ಲಾಹನು ತನ್ನ ಜನರನ್ನು ಅಲ್ಲಾಹನೊಬ್ಬನನ್ನೇ ಆರಾಧಿಸಲು ಕರೆಯಲು ಅವರನ್ನು ಕಳುಹಿಸಿದನು ಎಂದು ನಮಗೆ ತಿಳಿಸಿದ್ದಾನೆ. ಮತ್ತು ಯೇಸುರವರು ತನ್ನನ್ನು ಆರಾಧಿಸುವಂತೆ ಜನರಿಗೆ ಹೇಳಲಿಲ್ಲ, ಬದಲಾಗಿ ಅವರೂ ಸಹ ತನ್ನ ಸೃಷ್ಟಿಕರ್ತನನ್ನು ಆರಾಧಿಸುತ್ತಿದ್ದರೆಂದು ನಮಗೆ ತಿಳಿಸಿದ್ದಾನೆ.

ಇಸ್ಲಾಂ ಧರ್ಮವು ಸಹಜ ಸ್ವಭಾವ ಮತ್ತು ಸದ್ಬುದ್ಧಿಯೊಂದಿಗೆ ಹೊಂದಿಕೊಳ್ಳುವ ಧರ್ಮವಾಗಿದೆ. ಇದನ್ನು ಸುಸ್ಥಿತಿಯ ಮನಸ್ಸುಗಳು

ಸ್ವೀಕರಿಸುತ್ತವೆ. ಇದನ್ನು ಮಹಾ ಸೃಷ್ಟಿಕರ್ತ ತನ್ನ ಸೃಷ್ಟಿಗಳಿಗಾಗಿ ಶಾಸನ ಮಾಡಿದ ಧರ್ಮವಾಗಿದೆ. ಇದು ಎಲ್ಲಾ ಜನರಿಗೆ ಒಳ್ಳೆಯದು ಮತ್ತು ಸಂತೋಷವನ್ನು ನೀಡುವ ಧರ್ಮವಾಗಿದೆ. ಇದು ಜಾತಿ ಅಥವಾ ವರ್ಣಭೇದ ಮಾಡುವುದಿಲ್ಲ. ಇಸ್ಲಾಂನಲ್ಲಿ ಎಲ್ಲಾ ಜನರು ಸಮಾನರು. ಇಸ್ಲಾಂನಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗಿಂತ ತನ್ನ ಒಳ್ಳೆಯ ಕೆಲಸದಿಂದ ಮಾತ್ರ ಪ್ರತ್ಯೇಕಿಸಲ್ಪಡುತ್ತಾನೆ.

ಪ್ರತಿಯೊಬ್ಬ ಪ್ರಭುದ್ಧ ಮನುಷ್ಯನು ಅಲ್ಲಾಹನನ್ನು ಪ್ರಭುವಾಗಿ, ಇಸ್ಲಾಂ ಅನ್ನು ಧರ್ಮವಾಗಿ ಮತ್ತು ಮುಹಮ್ಮದ್ ಅವರನ್ನು ರಸೂಲಾಗಿ ನಂಬಬೇಕು. ಇದು ಮನುಷ್ಯನಿಗೆ ಆಯ್ಕೆಯ ವಿಷಯವಲ್ಲ; ಏಕೆಂದರೆ ಕಿಯಾಮತ್ ದಿನದಂದು ಅಲ್ಲಾಹನು ರಸೂಲುಗಳಿಗೆ ನೀಡಿದ ಉತ್ತರವನ್ನು ಕೇಳುತ್ತಾನೆ. ಹಾಗಾಗಿ ನಂಬಿದವರಿಗೆ ದೊಡ್ಡ ಗೆಲುವು ಮತ್ತು ಸುಖವಿದೆ, ಆದರೆ ಇದನ್ನು ನಂಬದವರು ದೊಡ್ಡ ನಷ್ಟವನ್ನು ಅನುಭವಿಸುತ್ತಾರೆ.

ಮುಸ್ಲಿಂ ಎಂದರೆ, "ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್, ವ ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್" (ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲ ಮತ್ತು ಮುಹಮ್ಮದ್ (ಸ) ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ಹೇಳುತ್ತೇನೆ) ಎಂದು ಅದರ ಅರ್ಥವನ್ನು ತಿಳಿದು ಅದರಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಹೇಳುವವನು.

ನಂತರ, ಅಲ್ಲಾಹನು ತನ್ನ ಮೇಲೆ ಕಡ್ಡಾಯಗೊಳಿಸಿದ ಕರ್ತವ್ಯಗಳನ್ನು ನಿರ್ವಹಿಸಲು, ಇಸ್ಲಾಂನ ಉಳಿದ ಶಾಸನಗಳನ್ನು (ಶರೀಅತ್) ಹಂತಹಂತವಾಗಿ ಕಲಿಯುವವನು.

❊❊❊

رئاسة الشؤون الدينية
بالمسجد الحرام والمسجد النبوي

# رسالة الحرمين

# Message of The Two Holy Mosques

Guidance content for the visitors of the Holy Mosque and the Prophet's Mosque in languages.